**<u>ಅಸಲು ದಾವಾ ಸಂಖ್ಯೆ -115/2023</u>** **ಪಿ.ಡಬ್ಲ್ಯೂ:-1**

ದಿನಾಂಕಃ 01-07-2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನನ್ನ ಅಣ್ಣ ಮುದ್ದ ಹನುಮಂತಪ್ಪನಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೇ ಹೆಂಡತಿ ಸರೋಜಮ್ಮ, ಎರಡನೆ ಹೆಂಡತಿ ಸುನಂದಮ್ಮ ಎಂದರೆ ಸರಿ. ಮೊದಲನೇ ಹೆಂಡತಿ ಸರೋಜಮ್ಮ ಈಗ ಜೀವಂತವಾಗಿದ್ದಾರೆ ಎಂದರೆ ಸರಿ. ಸರೋಜಮ್ಮರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಮ್ಮ ತಂದೆ ಈಗ್ಗೆ 30-40 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಪ್ರತ್ಯೇಕವಾಗಿ ವಾಸವಾಗಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಈಗ್ಗೆ 5-6 ವರ್ಷಗಳಿಂದ ಸರ್ವೇ ನಂ.74 ರಲ್ಲಿ ನಾನು ಮತ್ತು ನನ್ನ ಇಬ್ಬರು ಅಣ್ಣ ತಮ್ಮಂದಿರು ತಲಾ 1 ಎಕರೆ ಜಮೀನನ್ನು ಅಂದಿನಿಂದಲೂ ಇಂದಿನವರೆಗೂ ಸಾಗುವಳಿ ಮಾಡಿಕೊಂಡು ಸ್ವಾಧೀನಾನುಭವದಲ್ಲಿದ್ದೇವೆ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ಸುಮಾರು ವರ್ಷಗಳ ಹಿಂದೆಯೇ ತನ್ನ ಹೆಂಡತಿ ಮಕ್ಕಳೊಂದಿಗೆ ಬೇರೆಯಾಗಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿ. ನಮ್ಮ ತಂದೆಯ ಹೆಸರಿಗೆ ಸರ್ವೇ ನಂ.74 ರ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.75 ರ ಆಸ್ತಿಯು ನಿಮ್ಮ ತಂದೆಯ ಹೆಸರಿನಲ್ಲಿರುವ ಬಗ್ಗೆ ಏನಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಮ್ಮ ತಂದೆಯವರು 1974 ನೇ ಸಾಲಿನಲ್ಲಿ ಸ್ವಾಧೀನಾನುಭವದಲ್ಲಿದ್ದುಕೊಂಡು ಸಾಗುವಳಿ

ಮಾಡುತ್ತಿದ್ದರು ಈಗ್ಗೆ 2 ವರ್ಷಗಳ ಹಿಂದೆ 1 ನೇ ಪ್ರತಿವಾದಿಯ ಗಂಡನಾದ ನನ್ನ ಅಣ್ಣನ ಹೆಸರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂ.75 ರ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಾಗಲೀ ಅಥವಾ ನನ್ನ ಅಣ್ಣ ಶೇಷಗಿರಿಯಪ್ಪರವರ ಹೆಸರಿನಲ್ಲಾಗಲೀ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಶೇಷಗಿರಿಯಪ್ಪರವರು 2020 ನೇ ಸಾಲಿನಲ್ಲಿ ತೀರಿಕೊಂಡಿದ್ದಾರೆ ಈಗ್ಗೆ 2 ವರ್ಷಗಳ ಹಿಂದೆ ಅವರ ಹೆಸರಿಗೆ ದಾವಾ ಐಟಂ ನಂ.2 ರ ಆಸ್ತಿಯು ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯು 2022-23 ನೇ ಸಾಲಿನಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ಸರ್ಕಾರದಿಂದ ಮಂಜೂರಾದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿಗೆ ಮಂಜೂರಾಗುವ ಸಮಯದಲ್ಲಿ ನಾನು ಮತ್ತು ನನ್ನ ಅಣ್ಣ ಮುದ್ದಹನುಮಂತಪ್ಪರವರು ಸದರಿ ಆಸ್ತಿ ಒಟ್ಟು ಕುಟುಂಬದ ಆಸ್ತಿ ಮತ್ತು ಸದರಿ ಆಸ್ತಿಯಲ್ಲಿ ನಮಗೂ ಭಾಗಾಂಶ ಇದೆ ಎಂದು ಅರ್ಜಿಯನ್ನು ಸಲ್ಲಿಸಿದ್ದೆವು. ಆ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಐಟಂ ನಂ.2 ರ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿದ್ದರಿಂದ ನನಗೂ ಮತ್ತು ನನ್ನ ಅಣ್ಣ ಮುದ್ದಹನುಮಂತಪ್ಪರವರಿಗೂ ಯಾವುದೇ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯು 1 ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾದಂತಹ ಸ್ವಯಾರ್ಜಿ ಆಸ್ತಿ ಆಗಿದ್ದರಿಂದ ನನಗೂ ಮತ್ತು ನನ್ನ ಅಣ್ಣ ಮುದ್ದಹನುಮಂತಪ್ಪರವರಿಗೂ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿಯನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ಈಗ್ಗೆ 2 ವರ್ಷಗಳ ಹಿಂದೆ ಊರಿನ ಪಂಚಾಯಿತಿಯಲ್ಲಿ ಪಂಚಾಯಿತಿದಾರರನ್ನು ಕೇಳಿದ್ದು ತದನಂತರ ದಾವೆಯನ್ನು ಸಲ್ಲಿಸಿದ್ದೆನು. ದಾವಾ ಐಟಂ ನಂ.2 ರ ಆಸ್ತಿಯು 1 ನೇ ಪ್ರತಿವಾದಿಯವರ ಸ್ವಯಾರ್ಜಿತ ಆಸ್ತಿ ಆಗಿದ್ದರಿಂದ ಸದರಿ ಆಸ್ತಿಯಲ್ಲಿ ನಮಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯ ಎಲ್ಲಾ ದಾಖಲಾತಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.